# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1299 |
| ಮಾನ್ಯ ಸದಸ್ಯರ ಹೆಸರು | ಶ್ರೀ ರಾಮೋಜಿಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.12.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 30.10.2025ರ ಹೊತ್ತಿಗೆ ರಾಜ್ಯದಲ್ಲಿ ಜಿಲ್ಲಾವಾರು ಬಾಕಿ ಇರುವ ಪೋಡಿ/ ದುರಸ್ತಿ ಅರ್ಜಿಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಮೋಜಿಣಿ ತಂತ್ರಾಂಶದಲ್ಲಿ ವಿವಿಧ ರೀತಿಯ ಒಟ್ಟು 2,42,224 ಪೋಡಿ ಪ್ರಕರಣಗಳು ಬಾಕಿ ಇರುತ್ತದೆ.<br><br>ಸದರಿ ಅರ್ಜಿಗಳಲ್ಲಿ 98,316 ಪ್ರಕರಣಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು 1,43,908 ಪ್ರಕರಣಗಳು ಭೂಮಾಪನ ಶಾಖೆಯಲ್ಲಿ ಬಾಕಿಯಿರುತ್ತವೆ. ಜಿಲ್ಲಾವಾರು ಪ್ರಗತಿ ವಿವರವನ್ನು **ಅನುಭಂದ-1** ರಲ್ಲಿ ಲಗತ್ತಿಸಿದೆ. |
| (ಆ) | ಜಿಲ್ಲಾವಾರು ಪೋಡಿ ಅರ್ಜಿಯನ್ನು ವಿಲೇವಾರಿ ಮಾಡಲು ತೆಗೆದುಕೊಳ್ಳುವ ಸರಾಸರಿ ಸಮಯ ಎಷ್ಟು; | ರಾಜ್ಯದಲ್ಲಿ ಪೋಡಿ ಅರ್ಜಿಯನ್ನು ವಿಲೇವಾರಿ ಮಾಡಲು ಅರ್ಜಿ ಸ್ವೀಕೃತಿ ದಿನದಿಂದ 37 ದಿನಗಳು ಮತ್ತು ಭೂಮಾಪಕರಿಗೆ ಹಂಚಿಕೆಯಾದ ದಿನದಿಂದ 23 ಸರಾಸರಿ ಸಮಯ ತೆಗೆದುಕೊಳ್ಳಲಾಗುತ್ತಿದೆ.<br><br>ಪೋಡಿ ಕೋರಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆಯಾದ ದಿನಾಂಕದಿಂದ 45 ದಿನಗಳಲ್ಲಿ ಇತ್ಯರ್ಥಪಡಿಸಲು ಕಾಲಮಿತಿ ನಿಗಧಿ ಪಡಿಸಲಾಗಿದೆ.<br><br>ಪೋಡಿ ಅರ್ಜಿಯನ್ನು ವಿಲೇವಾರಿ ಮಾಡಲು ತೆಗೆದುಕೊಳ್ಳುವ ಸರಾಸರಿ ಸಮಯದ ಜಿಲ್ಲಾವಾರು ವಿವರವನ್ನು **ಅನುಭಂದ -2** ರಲ್ಲಿ ಲಗತ್ತಿಸಿದೆ. |
| (ಇ) | ಸರ್ಕಾರವು ನಿಗದಿಪಡಿಸಿದ ಕಡ್ಡಾಯ ಸಮಯಸೂಚಿ ಏನು ಮತ್ತು ಅದನ್ನು ಮೀರಿದ ಪ್ರಕರಣಗಳು ಎಷ್ಟು; ಬಾಕಿ ಉಳಿದಿರುವುದಕ್ಕೆ ಪ್ರಾಥಮಿಕ ಕಾರಣಗಳೇನು; | |
| (ಈ) | ಹಿಂದಿನ ದೋಷಗಳಿಂದಾಗಿ ಪುನರಾವರ್ತಿತ ಸಮೀಕ್ಷೆಗಳು/ ಹೊಸ ಪೋಡಿಗಳನ್ನು ತಡೆಯಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? | ರಾಜ್ಯದಲ್ಲಿ ಆದ್ಯತೆ ಮೇರೆಗೆ ಸ್ವಯಂಪ್ರೇರಿತವಾಗಿ ಮಂಜೂರಿಯಾದ ಜಮೀನುಗಳ ಅಳತೆ ಕುರಿತು ದರಖಾಸ್ತು ಪೋಡಿ ಅಭಿಯಾನ ಮತ್ತು ಖಾಸಗಿ ಜಮೀನುಗಳಲ್ಲಿ ಪೋಡಿ ಅಳತೆ ಕುರಿತು ಲಭ್ಯ ಭೂಮಾಪಕರನ್ನು ಬಳಸಿ ಅಳತೆ ಕಾರ್ಯ ಕೈಗೊಳ್ಳಲಾಗುತ್ತಿದೆ.<br><br>ದರಖಾಸ್ತು ಪೋಡಿ ಅಭಿಯಾನದಲ್ಲಿ 16,130 |

ಮಂಜೂರಿದಾರರ ಅಳತೆ ಮತ್ತು ಪೋಡಿ ಮುಕ್ತ ಗ್ರಾಮ ಯೋಜನೆಯಡಿ 6,403 ಗ್ರಾಮಗಳ 38,323 ಬಹುಮಾಲಿಕತ್ವದ ಪಹಣಿಗಳ ಅಳತೆ ಕಾರ್ಯ ಸೇರಿದಂತೆ ಮೋಜಿಣಿ ತಂತ್ರಾಂಶದಲ್ಲಿ ಸ್ವೀಕೃತಿಯಾದ 1,43,908 ಪ್ರಕರಣಗಳು ಅಳತೆಗಾಗಿ ಬಾಕಿಯಿರುತ್ತವೆ.

ದರಖಾಸ್ತು ಪೋಡಿ ಕುರಿತಂತೆ ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳ ಭರ್ತಿ ಮಾಡಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 156 ಎಸ್‌ಎಸ್‌ಎಂ 2024, ದಿನಾಂಕ 25-11-2024 ರಲ್ಲಿ ಸರಳೀಕರಿಸಿ, ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಪೋಡಿ ದುರಸ್ತಿ ಪಡಿಸಲು ಆದೇಶಿಸಿದೆ.

ಹಿಂದಿನ ದೋಷಗಳಿಂದಾಗಿ ಪುನರಾವರ್ತಿತ ಸಮೀಕ್ಷೆಗಳು/ ಹೊಸ ಪೋಡಿಗಳನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-

1. ದರಖಾಸ್ತು ಪೋಡಿ ಪ್ರಕರಣಗಳಲ್ಲಿ ನಮೂನೆ 01 ರಿಂದ 05 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ.
2. ದರಖಾಸ್ತು ಪೋಡಿ, 11ಇ, ಹದ್ದುಬಸ್ತು ಮುಂತಾದ ಎಲ್ಲಾ ತರಹದ ಅರ್ಜಿಗಳನ್ನು ಸರ್ಕಾರಿ ಭೂಮಾಪಕರೊಂದಿಗೆ ಪರವಾನಗಿ ಭೂಮಾಪಕರನ್ನು ಸಹಾ ಬಳಸಿಕೊಂಡು ಅಳತೆ ಮಾಡಲು ಆದೇಶಿಸಿದೆ.
3. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲಿ ಸ್ವೀಕರಿಸ ಲಾಗುತ್ತಿದ್ದು ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲೇ ಸರದಿ ಸಾಲಿನಂತೆ (FIFO) ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.
4. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ

| | | |
|---|---|---|
| | | ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>5. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>6. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಕಂಇ 231 ಎಸ್ಎಸ್ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| ಅನುಭಂದ-1 | | | | | | | | LAQ(1299)1130 |
|---|---|---|---|---|---|---|---|---|
| ಮಾಹೆ ಅಕ್ಟೋಬರ್ 2025 ರ ಅಂತ್ಯಕ್ಕೆ ಜಿಲ್ಲಾವಾರು ಪೋಡಿ ಪ್ರಕರಣಗಳ ಪ್ರಗತಿ ವಿವರ | | | | | | | | |
| ಕ್ರ | ಜಿಲ್ಲೆ | ಪಾ.ಶಿಲು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ |
| 1 | ಉಡುಪಿ | 9796 | 1995 | 11791 | 1526 | 10265 | 2676 | 7589 |
| 2 | ಉತ್ತರಕನ್ನಡ | 3158 | 246 | 3404 | 534 | 2870 | 613 | 2257 |
| 3 | ಕೊಡಗು | 2852 | 311 | 3163 | 432 | 2731 | 57 | 2674 |
| 4 | ಕೊಪ್ಪಳ | 5834 | 910 | 6744 | 1147 | 5597 | 2703 | 2894 |
| 5 | ಕೋಲಾರ | 8063 | 1209 | 9272 | 538 | 8734 | 4122 | 4612 |
| 6 | ಗದಗ | 2570 | 1426 | 3996 | 808 | 3188 | 548 | 2640 |
| 7 | ಗುಲ್ಬರ್ಗ | 8117 | 1560 | 9677 | 1193 | 8484 | 2986 | 5498 |
| 8 | ಚಾಮರಾಜನಗರ | 3883 | 1458 | 5341 | 764 | 4577 | 1209 | 3368 |
| 9 | ಚಿಕ್ಕಬಳ್ಳಾಪುರ | 5448 | 587 | 6035 | 360 | 5675 | 2293 | 3382 |
| 10 | ಚಿಕ್ಕಮಗಳೂರು | 5780 | 543 | 6323 | 532 | 5791 | 2918 | 2873 |
| 11 | ಚಿತ್ರದುರ್ಗ | 10609 | 1142 | 11751 | 1463 | 10288 | 4179 | 6109 |
| 12 | ತುಮಕೂರು | 23729 | 2728 | 26457 | 2300 | 24157 | 7622 | 16535 |
| 13 | ದಕ್ಷಿಣ ಕನ್ನಡ | 15519 | 2539 | 18058 | 1057 | 17001 | 4850 | 12151 |
| 14 | ದಾವಣಗೆರೆ | 11807 | 1042 | 12849 | 2385 | 10464 | 6019 | 4445 |
| 15 | ಧಾರವಾಡ | 1323 | 126 | 1449 | 205 | 1244 | 556 | 688 |
| 16 | ಬಳ್ಳಾರಿ | 3356 | 145 | 3501 | 427 | 3074 | 872 | 2202 |
| 17 | ಬಾಗಲಕೋಟೆ | 3993 | 1124 | 5117 | 1100 | 4017 | 1267 | 2750 |
| 18 | ಬಿಜಾಪುರ | 5526 | 2241 | 7767 | 1625 | 6142 | 2003 | 4139 |
| 19 | ಬೀದರ್ | 7216 | 750 | 7966 | 1002 | 6964 | 4541 | 2423 |
| 20 | ಬೆಂಗಳೂರು ಗ್ರಾಮಾಂತರ | 7577 | 879 | 8456 | 771 | 7685 | 3585 | 4100 |
| 21 | ಬೆಂಗಳೂರು ಜಿಲ್ಲೆ | 7007 | 390 | 7397 | 282 | 7115 | 4271 | 2844 |
| 22 | ಬೆಂಗಳೂರು ದಕ್ಷಿಣ | 8099 | 1601 | 9700 | 929 | 8771 | 2512 | 6259 |
| 23 | ಬೆಳಗಾವ | 9985 | 1867 | 11852 | 2031 | 9821 | 3342 | 6479 |
| 24 | ಮಂಡ್ಯ | 14304 | 2361 | 16665 | 2026 | 14639 | 7309 | 7330 |
| 25 | ಮೈಸೂರು | 10148 | 2622 | 12770 | 2150 | 10620 | 5993 | 4627 |
| 26 | ಯಾದಗಿರ್ | 5395 | 1349 | 6744 | 1820 | 4924 | 2234 | 2690 |
| 27 | ರಾಯಚೂರು | 8871 | 3662 | 12533 | 2393 | 10140 | 4000 | 6140 |
| 28 | ವಿಜಯನಗರ | 2861 | 366 | 3227 | 302 | 2925 | 1376 | 1549 |
| 29 | ಶಿವಮೊಗ್ಗ | 7263 | 1691 | 8954 | 999 | 7955 | 4683 | 3272 |
| 30 | ಹಾವೇರಿ | 6786 | 730 | 7516 | 889 | 6627 | 2876 | 3751 |
| 31 | ಹಾಸನ | 9008 | 2450 | 11458 | 1719 | 9739 | 4101 | 5638 |
| **Grand Total** | | **2,35,883** | **42,050** | **2,77,933** | **35,709** | **2,42,224** | **98,316** | **1,43,908** |

| ಅನುಭಂದ-2 | | | LAQ(1299)1130 |
|---|---|---|---|
| ರಾಜ್ಯದಲ್ಲಿ ಪೋಡಿ ಅರ್ಜಿಯನ್ನು ವಿಲೇವಾರಿ ಮಾಡಲು ತೆಗೆದುಕೊಳ್ಳುವ ಸರಾಸರಿ ಸಮಯದ ಜಿಲ್ಲಾವಾರು ವಿವರ | | | |
| ಕ್ರ | ಜಿಲ್ಲೆ | ಪೋಡಿ ಅರ್ಜಿ ಸ್ವೀಕೃತಿ ದಿನದಿಂದ ವಿಲೇವಾರಿಗೆ ತೆಗೆದುಕೊಳ್ಳುವ ಸರಾಸರಿ ಸಮಯ | ಪೋಡಿ ಅರ್ಜಿ ಭೂಮಾಪಕರಿಗೆ ಹಂಚಿಕೆಯಾದ ದಿನದಿಂದ ವಿಲೇವಾರಿಗೆ ತೆಗೆದುಕೊಳ್ಳುವ ಸರಾಸರಿ ಸಮಯ |
| 1 | ಬೆಳಗಾವ | 43 | 24 |
| 2 | ಬಾಗಲಕೋಟೆ | 37 | 28 |
| 3 | ಬಿಜಾಪುರ | 38 | 25 |
| 4 | ಗುಲ್ಬರ್ಗ | 43 | 23 |
| 5 | ಬೀದರ್ | 38 | 23 |
| 6 | ರಾಯಚೂರು | 26 | 19 |
| 7 | ಕೊಪ್ಪಳ | 32 | 23 |
| 8 | ಗದಗ | 34 | 24 |
| 9 | ಧಾರವಾಡ | 39 | 25 |
| 10 | ಉತ್ತರಕನ್‌ನಡ | 43 | 25 |
| 11 | ಹಾವೇರಿ | 30 | 24 |
| 12 | ಬಳ್ಳಾರಿ | 41 | 20 |
| 13 | ಚಿತ್ರದುರ್ಗ | 39 | 22 |
| 14 | ದಾವಣಗೆರೆ | 29 | 22 |
| 15 | ಶಿವಮೊಗ್ಗ | 36 | 22 |
| 16 | ಉಡುಪಿ | 34 | 17 |
| 17 | ಚಿಕ್ಕಮಗಳೂರು | 43 | 23 |
| 18 | ತುಮಕೂರು | 49 | 24 |
| 19 | ಕೋಲಾರ | 40 | 26 |
| 20 | ಬೆಂಗಳೂರು ಜಿಲ್ಲೆ | 39 | 29 |
| 21 | ಬೆಂಗಳೂರು ಗ್ರಾಮಾಂತರ | 34 | 27 |
| 22 | ಮಂಡ್ಯ | 34 | 23 |
| 23 | ಹಾಸನ | 33 | 21 |
| 24 | ದಕ್ಷಿಣ ಕನ್ನಡ | 38 | 28 |
| 25 | ಕೊಡಗು | 24 | 18 |
| 26 | ಮೈಸೂರು | 31 | 22 |
| 27 | ಚಾಮರಾಜನಗರ | 23 | 19 |
| 28 | ಚಿಕ್ಕಬಳ್ಳಾಪುರ | 52 | 20 |
| 29 | ಬೆಂಗಳೂರು ದಕ್ಷಿಣ | 43 | 26 |
| 30 | ಯಾದಗಿರ್ | 27 | 19 |
| 31 | ವಿಜಯನಗರ | 37 | 19 |
| **ರಾಜ್ಯದ ಒಟ್ಟು ಸರಾಸರಿ** | | **37** | **23** |